ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಲಯ,ಯಾದಗಿರಿ.

**Crl Misc No. 1364/2024**
**PW : 2**

ದಿನಾಂಕಃ 18-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಶರಣಪ್ಪ |
| ತಂದೆ/ಗಂಡನ ಹೆಸರುಃ | ಮರೆಪ್ಪ |
| ವಯಸ್ಸುಃ | 36 ವರ್ಷ |
| ಉದ್ಯೋಗಃ | ಕೂಲಿಕೆಲಸ |
| ವಾಸ ಸ್ಥಳಃ | ಹತ್ತಿಕುಣಿ |

ಮುಖ್ಯ ವಿಚಾರಣೆ ಎದುರುದಾರ ಪರವಾಗಿಃ ಶ್ರೀ ಪಿ. ಸಿ. ಎಮ್. ಪಿ ವಕೀಲರಿಂದಃ

1. ನನ್ನ ಮತ್ತು ಅರ್ಜಿದಾರಳ ಮದುವೆ 15 ವರ್ಷಗಳ ಹಿಂದೆ ಆಗಿರುತ್ತದೆ. ಸದರಿ ಮದುವೆ ಖರ್ಚನ್ನು ನಾವೆ ಮಾಡಿರುತ್ತೇವೆ. 2 ವರ್ಷಗಳ ಕಾಲ ಸುಖವಾಗಿ ಸಂಸಾರವನ್ನು ನಡೆಸಿರುತ್ತೇವೆ. ಸದರಿ ಒಂದು ಗಂಡು ಮಗು ಹುಟ್ಟಿದ ನಂತರ ತೊಟ್ಟಿಲು ಕಾರ್ಯಕ್ರಮ ಮಾಡಿಕೊಂಡು ತವರು ಮನೆಗೆ ಹೋದವರು ಮನೆಗೆ ಮರಳಿ ಬಂದಿರುವುದಿಲ್ಲ, ನಾನು 20 ಸಲ ಕರೆಯಲು ಹೋದಾಗ ಕೂಡ ಬಂದಿರುವುದಿಲ್ಲ. ಅರ್ಜಿದಾರರ ಮನೆಯವರು ಮದುವೆಯಲ್ಲಿ ನನಗೆ ಏನೂ ಕೊಟ್ಟಿರುವುದಿಲ್ಲ. ಸದರಿ ಅರ್ಜಿದಾರಳು ಹುಷಾರಿರುವುದಿಲ್ಲ ಎಂದು ಹೋದವಳು ಕರೆಯಲು ಹೋದರೂ ಕೂಡ ಬಂದಿರುವುದಿಲ್ಲ. ಸದರಿ ಅರ್ಜಿದಾರಳು ನನಗೆ ಅವರ ತವರು ಮನೆಯಲ್ಲಿ ಬಂದು ಇರಲು ಹೇಳಿರುತ್ತಾಳೆ ಆಗ ನಾನು ಬರುವುದಿಲ್ಲ ಎಂದು ಹೇಳಿರುತ್ತೇನೆ. ಈಗ ನನ್ನ ಜೊತೆ ನನ್ನ ತಾಯಿ ಇರುತ್ತಾಳೆ. ಸದರಿ ನನ್ನ ಅಣ್ಣಾ ಮರಣ ಹೊಂದಿರುತ್ತಾನೆ, ನನ್ನ ತಾಯಿ ಮತ್ತು ನನ್ನ ಅಣ್ಣಾನ ಕುಟುಂಬ ಸದಸ್ಯರನ್ನು ನೋಡಿಕೊಳ್ಳುವ ಜವಾಬ್ದಾರಿ ಇರುತ್ತದೆ. ಹಿರಿಯರು ಆಸ್ತಿಗಳು ಎಲ್ಲಾ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಸದರಿ ಅರ್ಜಿದಾರಳು ಈಗ ಬಂದರೂ ಕೂಡ ಅವರ ಜೊತೆ ಸಂಸಾರ ಮಾಡಲು ನಾನು ತಯಾರು ಇರುತ್ತೇನೆ. ಆಸ್ತಿಗಳು ಎಲ್ಲಾ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ.

ಅರ್ಜಿದಾರಳ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ